**ಸಾಕ್ಷಿಯನ್ನು ದಿನಾಂಕ 26.10.2023 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಎಂ ಎಸ್ ಸಿ ವಕೀಲರಿಂದಃ**

ಎರಡು ಕ್ಯಾಷ್ ಪೈಡ್ ಒಚರ್ ಗಳನ್ನು ಹಾಜರು ಮಾಡಿದ್ದು ಅವುಗಳನ್ನು **ನಿಪಿ 10 ಮತ್ತು 11** ಎಂದು ಗುರುತಿಸಲಾಯಿತು.

ಎರಡು ಫಾರ್ಮರ್ ಲೆಡ್ಜರ್ ಗಳನ್ನು ಹಾಜರು ಮಾಡಿದ್ದು ಅವುಗಳನ್ನು **ನಿಪಿ 12 ಮತ್ತು 13** ಎಂದು ಗುರುತಿಸಲಾಯಿತು.

9 ಟ್ರ್ಯಾಕ್ಟರ್ ಕ್ಯಾಷ್ ಬಿಲ್ ಗಳನ್ನು ಹಾಜರು ಮಾಡಿದ್ದು ಅವುಗಳನ್ನು **ನಿಪಿ 14 ರಿಂದ 22** ಎಂದು ಗುರುತಿಸಲಾಯಿತು.

ಕ್ಯಾಷ್ ಒಚರ್ ನ್ನು ಹಾಜರು ಮಾಡಿದ್ದು ಅದನ್ನು **ನಿಪಿ 23** ಎಂದು ಗುರುತಿಸಲಾಯಿತು.

14 ಟ್ರ್ಯಾಕ್ಟರ್ ಕ್ಯಾಷ್ ಬಿಲ್ ಗಳನ್ನು ಹಾಜರು ಮಾಡಿದ್ದು ಅವುಗಳನ್ನು **ನಿಪಿ 24 ರಿಂದ 37** ಎಂದು ಗುರುತಿಸಲಾಯಿತು.

ದಿನಾಂಕ 03.07.2019 ರ ಕ್ಯಾಷ್ ಒಚರ್ ನ್ನು ಹಾಜರು ಮಾಡಿದ್ದು ಅದನ್ನು **ನಿಪಿ 38** ಎಂದು ಗುರುತಿಸಲಾಯಿತು.

7 ಫಾರ್ಮರ್ ಲೆಡ್ಜರ್ ಗಳನ್ನು ಹಾಜರು ಮಾಡಿದ್ದು ಅವುಗಳನ್ನು **ನಿಪಿ 39 ಮತ್ತು 45** ಎಂದು ಗುರುತಿಸಲಾಯಿತು.

ದಿನಾಂಕ 20.07.2021 ಎರಡು ಕ್ಯಾಷ್ ಒಚರ್ ಗಳನ್ನು ಹಾಜರು ಮಾಡಿದ್ದು ಅವುಗಳನ್ನು **ನಿಪಿ 46 ಮತ್ತು 47** ಎಂದು ಗುರುತಿಸಲಾಯಿತು.

9 ಫಾರ್ಮರ್ ಲೆಡ್ಜರ್ ಗಳನ್ನು ಹಾಜರು ಮಾಡಿದ್ದು ಅವುಗಳನ್ನು **ನಿಪಿ 48 ಮತ್ತು 56** ಎಂದು ಗುರುತಿಸಲಾಯಿತು.

ದಿನಾಂಕ 11.07.2016 ಕ್ಯಾಷ್ ಪೈಡ್ ಒಚರ್ ನ್ನು ಹಾಜರು ಮಾಡಿದ್ದು ಅದನ್ನು **ನಿಪಿ 57** ಎಂದು ಗುರುತಿಸಲಾಯಿತು.

ಟ್ರ್ಯಾಕ್ಟರ್ ಕ್ಯಾಷ್ ಬಿಲ್ ನ್ನು ಹಾಜರು ಮಾಡಿದ್ದು ಅದನ್ನು **ನಿಪಿ 58** ಎಂದು ಗುರುತಿಸಲಾಯಿತು.

**(ನಿಪಿ 10 ರಿಂದ 58 ರ ದಾಖಲೆಗಳನ್ನು 3 ಮತ್ತು 4 ನೇ ಪ್ರತಿವಾದಿಯರ ಪರ ವಕೀಲರ ತಕರಾರಿನ ಮೇರೆಗೆ ರುಜುವಾತುಪಡಿಸುವ ಹೊಣೆಗಾರಿಕೆಗೆ ಒಳಪಟ್ಟು ನಿಶಾನೆಗಳಾಗಿ ಗುರುತಿಸಲಾಯಿತು).**

**ಪಾಟೀ ಸವಾಲುಃ 3 ಮತ್ತು 4 ನೇ ಪ್ರತಿವಾದಿಯರ ಪರ ಶ್ರೀ. ಪಿ ಎಸ್ ಬಿ ವಕೀಲರಿಂದಃ**

ನಾನು ಹಾಜರುಪಡಿಸಿರುವ ನಿಪಿ 10 ರಿಂದ 58 ರ ದಾಖಲೆಗಳನ್ನು ನನಗೆ ಯಾರು ನೀಡಿದ್ದರು ಎಂದು ಆ ದಾಖಲೆಗಳಲ್ಲಿ ನಮೂದು ಇಲ್ಲ ಎಂದರೆ ಸಾಕ್ಷಿ ಶ್ರೀನಿವಾಸ್‌ಪುರದ ಮಂಡಿಯವರು ಆ ದಾಖಲೆಗಳನ್ನು ನೀಡಿದ್ದರು ಎಂದು ನುಡಿಯುತ್ತಾರೆ. ಆ ದಾಖಲೆಗಳಲ್ಲಿ ಆ ದಾಖಲೆಯನ್ನು ನೀಡಿದವರ ಹೆಸರು, ವಿಳಾಸ ಇಲ್ಲ ಎಂದರೆ ಸರಿ. ಸಾಕ್ಷಿ ಮಂಡಿಯವರು ಎಲ್ಲಾರಿಗೂ ಇದೇ ರೀತಿ ರಶೀದಿಗಳನ್ನು ನೀಡುತ್ತಾರೆ ಎಂದು ಸ್ವತಃ ನುಡಿಯುತ್ತಾರೆ.

2. ನಿಪಿ 10 ರಿಂದ 58 ರ ದಾಖಲೆಗಳಲ್ಲಿ ನಮೂದಿಸಿರುವ ದಿನಾಂಕಕ್ಕೂ ಮೊದಲೇ ನನ್ನ ಅಣ್ಣ ವೆಂಕಟಶಿವ ಬೆಂಗಳೂರಿನಲ್ಲಿ ಆಸ್ತಿಗಳನ್ನು ಖರೀದಿಸಿದ್ದರು ಎಂದರೆ ಸರಿ. ಈ ಕೇಸನ್ನು ದಾಖಲಿಸುವಾಗ ವಕೀಲರಿಗೆ ನಿಪಿ 10 ರಿಂದ 58 ರ ದಾಖಲೆಯ ಬಗ್ಗೆ ಹೇಳಿದ್ದೀರಾ ಎಂದರೆ ಸಾಕ್ಷಿ ಹೇಳಿಲ್ಲ. ಸಾಕ್ಷಿ ಆ ದಾಖಲೆಗಳನ್ನು ಮತ್ತೇ ಮಾಡಿಕೊಂಡಿದ್ದೇವೆ ಎಂದು ಸ್ವತಃ ನುಡಿಯುತ್ತಾರೆ. ಈ ಕೇಸನ್ನು ದಾಖಲಿಸುವ ಮೊದಲು ನಿಪಿ 10 ರಿಂದ 58 ರ ದಾಖಲೆಗಳು ನನ್ನ ಬಳಿ ಇರಲಿಲ್ಲ ಎಂದರೆ ಸರಿ. ಕಳೆದ ಬಾರಿ ಪಾಟೀ ಸವಾಲಿಗೆ ಒಳಗಾದ ನಂತರ ನಾನು ಈ ದಾಖಲೆಗಳನ್ನು ಸೃಷ್ಟಿಸಿ ತಂದಿದ್ದೇನೆ ಎಂದರೆ ಸರಿಯಲ್ಲ.

3. ನಿಪಿ 10 ರಿಂದ 58 ರ ದಾಖಲೆಗಳು ಕಾನೂನು ಪ್ರಕಾರ ಆದ ದಾಖಲೆಗಳು ಅಲ್ಲ, ಅವುಗಳನ್ನು ಈ ಕೇಸಿಗಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

**(1 ಮತ್ತು 2 ನೇ ಪ್ರತಿವಾದಿಯರ ಪರ ಶ್ರೀ ಎಂ ವಿ ಎಂ ವಕೀಲರು ಪಾಟೀ ಸವಾಲಿಗೆ ಸಮಯಕೋರಿದ್ದರಿಂದ ಮುಂದೂಡಲಾಯಿತು)**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿಂತಾಮಣಿ.